# ನಂ.19722ನೇ ಕೈಗಾರಿಕೋದ್ಯಮಿಗಳ ಮತ್ತು ವೃತ್ತಿ ನಿರತರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೈಪಾಸ್ ರಸ್ತೆ, ಕುಶಾಲನಗರ –571234, ಕೊಡಗು ಜಿಲ್ಲೆ.

## ಸಂಘವು 2004 ನೇ ಇಸವಿಯಲ್ಲಿ ಪ್ರಾರಂಭಗೊಂಡಿದ್ದು,
## 2024–25ರ ಒಂದು ವರದಿ
## ರೂ.2,02,12,469.63 ನಿವ್ವಳ ಲಾಭಗಳಿಸಿರುತ್ತದೆ

ಸಂಘವು ಕಳೆದ **2023–2024**ನೇ ಸಾಲಿನಲ್ಲಿ **1355** ಸದಸ್ಯರಿಂದ ರೂ.**3.22** ಕೋಟಿಗಳ ಪಾಲು ಬಂಡವಾಳ ಸಂಗ್ರಹಿಸಿದ್ದು, ಈ ವರದಿ **2024–2025** ನೇ ಸಾಲಿನಲ್ಲಿ **1404** ಸದಸ್ಯರನ್ನು ಹೊಂದಿದ್ದು, ಅವರಿಂದ ಪಾಲು ಬಂಡವಾಳ ರೂ.**3.48** ಕೋಟಿಗಳನ್ನು ಸಂಗ್ರಹಿಸಿರುತ್ತೇವೆ.

ಸಂಘದ ಕಾರ್ಯವ್ಯಾಪ್ತಿಯೊಳಗೆ ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಿದ್ದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಸಹ ಸೇರಿಕೊಂಡಿರುತ್ತದೆ. ಸಂಘಕ್ಕೆ ಈಗಾಗಲೇ ಕುಶಾಲನಗರ ಮತ್ತು ಶುಂಟಿಕೊಪ್ಪ ವ್ಯಾಪ್ತಿಯ ವ್ಯಾಪಾರಸ್ಥರು, ಉದ್ಯಮಿಗಳು ತಮ್ಮ ಸದಸ್ಯತನವನ್ನು ಪಡೆದುಕೊಂಡಿದ್ದು ಮುಂದಿನ ದಿನಗಳಲ್ಲಿ ಇನ್ನುಳಿದಿರುವ 3 ತಾಲ್ಲೂಕುಗಳಿಂದಲೂ ಹೆಚ್ಚೆಚ್ಚು ಸದಸ್ಯರನ್ನು ಸಂಘಕ್ಕೆ ನೊಂದಾವಣಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳುತ್ತೇವೆ. ಹಾಗೂ ಈ ಕಾರ್ಯವ್ಯಾಪ್ತಿಯಿಂದ ಹೆಚ್ಚಿನ ಜನರು ಸಂಘದ ಸದಸ್ಯತ್ವವನ್ನು ಪಡೆದುಕೊಂಡ ನಂತರ ಸರ್ಕಾರದಿಂದ ಸೂಕ್ತ ಅನುಮತಿಯನ್ನು ಪಡೆದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಮಡಿಕೇರಿ ಪಟ್ಟಣದಲ್ಲಿ, ಸೋಮವಾರಪೇಟೆ ತಾಲ್ಲೂಕಿನ ಶನಿವಾರಸಂತೆ ಪಟ್ಟಣದಲ್ಲಿ ಹಾಗೂ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಪಿರಿಯಾಪಟ್ಟಣ ಪಟ್ಟಣದಲ್ಲಿ ನೂತನ ಶಾಖೆಯನ್ನು ತೆರೆಯುವ ಬಗ್ಗೆ ನಾವುಗಳು ಆಡಳಿತ ಮಂಡಳಿಯವರು ಕ್ರಮ ಕೈಗೊಳ್ಳುತ್ತೇವೆಂದು ತಮಗೆ ತಿಳಿಯ ಪಡಿಸುತ್ತಿದ್ದೇವೆ

ಸಂಘವು ವಿವಿಧ ರೀತಿಯ ಠೇವಣಿಗಳನ್ನು ಸಂಗ್ರಹಿಸುತ್ತಿದ್ದು **31–03–2025**ರ ಅಂತ್ಯಕ್ಕೆ ಒಟ್ಟು ರೂ.**72.27** ಕೋಟಿಗಳಷ್ಟು ಠೇವಣಿಯನ್ನು ಸ್ವೀಕರಿಸಿದ್ದು, ಇದು ಕಳೆದ ಸಾಲಿಗಿಂತ ರೂ.**12.91** ಕೋಟಿಗಳಷ್ಟು ಹೆಚ್ಚಿಗೆ ಠೇವಣಿಯನ್ನು ಸಂಗ್ರಹಿಸಿ ಪ್ರಗತಿ ಸಾಧಿಸಿದೆ. ಸಂಘದ ದುಡಿಯುವ ಬಂಡವಾಳವು ಒಟ್ಟು ರೂ.**79.38** ಕೋಟಿಗಳಿಂದ ರೂ.**93.10** ಕೋಟಿಗಳಿಗೆ ಹೆಚ್ಚಿರುವುದನ್ನು ತಮಗೆ ತಿಳಿಸುತ್ತಿದ್ದೇವೆ.

ಸಂಘವು ಸ್ವೀಕರಿಸುತ್ತಿರುವ ಒಂದು ವರ್ಷದ ನಿರಖು ಠೇವಣಿಗಳಿಗೆ ಶೇ.**9** ರಷ್ಟು ಅಧಿಕ ಬಡ್ಡಿಯನ್ನು ನೀಡುತ್ತಿದ್ದು ಹಾಗೆಯೇ ನಿರಖು ಠೇವಣಿ ಮೂರು ವರ್ಷ ಲಾಕ್‌ಕಿಂಗ್( 3 year locking period) ಅವಧಿಗೆ ಶೇ.**9.50** ರಷ್ಟು ಅಧಿಕ ಬಡ್ಡಿ ನೀಡುತ್ತಿದ್ದು, ಹಿರಿಯ ನಾಗರಿಕರಿಗೆ, ಮಾಜಿ ಸೈನಿಕರಿಗೆ, ಅಂಗವಿಕಲರಿಗೆ, ಸಹಕಾರ ಸಂಘಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಶೇಕಡಾ **0.50** ಹೆಚ್ಚಿನ ಬಡ್ಡಿಯ ದರವನ್ನು ನೀಡುತ್ತಿದ್ದೇವೆ.

ಸಂಘದಲ್ಲಿ ಒಟ್ಟು ರೂ.**8.77** ಕೋಟಿಗಳಷ್ಟು ನಿಧಿಗಳಿದ್ದು ಇದರಲ್ಲಿ ಕ್ಷೇಮ ನಿಧಿ ರೂ.**2.90** ಕೋಟಿಗಳಷ್ಟು, ಕಟ್ಟಡ ನಿಧಿ ರೂ.**2.74** ಕೋಟಿಗಳಷ್ಟು (ಸದಸ್ಯರಿಂದ 65.34 ಲಕ್ಷಗಳಷ್ಟು), ಮರಣ ನಿಧಿ ರೂ.**33.69** ಲಕ್ಷಗಳಷ್ಟು ಹಾಗೂ ಇತರೇ ನಿಧಿಗಳು **ರೂ.2.79** ಕೋಟಿಗಳಷ್ಟು ಇರುತ್ತದೆ.

ಸಂಘದ **'ಎ'** ತರಗತಿ ಸದಸ್ಯರುಗಳು ತಮ್ಮ ಸ್ವಂತ ಕಟ್ಟಡದಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದು ಉತ್ತಮ ವ್ಯವಹಾರವನ್ನು ನಡೆಸುತ್ತಿರುವವರಿಗೆ ಸದಸ್ಯರ ಅನುಕೂಲಕ್ಕಾಗಿ, ಸಂಘದಲ್ಲಿ **24** ವಿವಿಧ ಸಾಲಗಳನ್ನು

ವಿತರಿಸುತ್ತಿದ್ದು, ಅದರಲ್ಲಿ ವ್ಯಾಪಾರಾಭಿವೃದ್ಧಿ ಮಾಸಿಕ ಕಂತಿನ ಸಾಲ, ಜಾಮೀನು ಮಧ್ಯಂತರ ಸಾಲ, ಪಿಗ್ಮಿ ಮೀರಳತೆ(ಓ.ಡಿ) ಸಾಲ, ವ್ಯಾಪಾರಾಭಿವೃದ್ಧಿ ದೀರ್ಘಾವಧಿ ಸಾಲ, ನಿವೇಶನ ಖರೀದಿ ಸಾಲ,ವ್ಯಾಪಾರ ಮೀರಳತೆ (3 ವರ್ಷ) ಸಾಲ, ವ್ಯಾಪಾರ ಮೀರಳತೆ ಸಾಲ (1 ವರ್ಷ), ಗೃಹ ನಿರ್ಮಾಣ ಸಾಲ, ಶೈಕ್ಷಣಿಕ ಸಾಲ, ವಾಹನ ಸಾಲ (ದ್ವಿಚಕ್ರ, ತ್ರಿಚಕ್ರ ಹಾಗೂ 4ಚಕ್ರ ವಾಹನಗಳ ಖರೀದಿ ಸಾಲ), ಆಭರಣ ಸಾಲ,ಮಹಿಳಾ ಚೇತನಾ ಗುಂಪು ಸಾಲ, ಅಭಯ ಗುಂಪು ಸಾಲ ಮತ್ತು ಠೇವಣಿಗಳ ಮೇಲಿನ ಸಾಲ, ಚಿನ್ನಾಭರಣ ಖರೀದಿ ಸಾಲ, ಗೃಹ ಉಪಯೋಗಿ ವಸ್ತುಗಳ ಖರೀದಿ ಸಾಲ, ಗೃಹ ನಿರ್ಮಾಣ ಸಾಲ ನೀಡುತ್ತಿದ್ದು ಸದಸ್ಯರು ಮತ್ತು ಸದಸ್ಯೇತರರಿಗೆ ಚಿನ್ನಾಭರಣಗಳ ಈಡಿನ ಮೇಲೆ ಅಡಮಾನ ಸಾಲಗಳನ್ನು ಸಹ ನೀಡುತ್ತಿದ್ದು, ಸಂಘದ ಸದಸ್ಯರುಗಳ ಹಾಗೂ ನಾಮಮಾತ್ರ ಸಂಘದ ಸದಸ್ಯರುಗಳ ಮತ್ತು ನಾಮಮಾತ್ರ ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಶೈಕ್ಷಣಿಕ ಸಾಲವನ್ನು ಪ್ರಾರಂಭಿಸಿದ್ದು, ದೇಶದ ಒಳಗೆ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.20 ಲಕ್ಷಗಳಂತೆ, ವಿದೇಶದಲ್ಲಿ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 50 ಲಕ್ಷಗಳವರೆಗೆ ಶೈಕ್ಷಣಿಕ ಸಾಲವನ್ನು ನೀಡುತ್ತಿರುವುದನ್ನು ಸಂತೋಷವಾಗಿ ತಮ್ಮಗಳಿಗೆ ತಿಳಿಸುತ್ತಿದ್ದೇವೆ. ಸಂಘದ ಸದಸ್ಯರಿಗೆ ನೂತನ ವಾಣಿಜ್ಯ ಸಂಕೀರ್ಣ ನಿರ್ಮಾಣ ಸಾಲ ರೂ.50 ಲಕ್ಷಗಳಿಂದ ರೂ.2 ಕೋಟಿ, ಗೃಹ ಸಾಲ ರೂ.50 ಲಕ್ಷಗಳಿಂದ ರೂ 1ಕೋಟಿ, ನಿವೇಶನ ಖರೀದಿ ಸಾಲ ರೂ.50 ಲಕ್ಷಗಳಿಂದ ರೂ. 1 ಕೋಟಿ, ವ್ಯಾಪಾರಾಭಿವೃದ್ಧಿ ದೀರ್ಘಾವಧಿ ಸಾಲ ರೂ. 50 ಲಕ್ಷಗಳಿಂದ ರೂ 1 ಕೋಟಿ, ವ್ಯಾಪಾರ ಅಭಿವೃದ್ಧಿ ಮೀರಳತೆ ಸಾಲ ರೂ.50 ಲಕ್ಷಗಳಿಂದ 1 ಕೋಟಿಗಳಿಗೆ ವಾಹನ ಸಾಲ ರೂ. 20 ಲಕ್ಷಗಳಿಂದ ರೂ. 50 ಲಕ್ಷಗಳಿಗೆ ಹೆಚ್ಚಿಸಿದ್ದು ಹಾಗೂ ರಾಷ್ಟ್ರೀಕೃತ ಬ್ಯಾಂಕ್, ಸಹಕಾರ ಸಂಘ-ಸಂಸ್ಥೆಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸ್ವಾಧೀನ ಪಡೆಸಿಕೊಳ್ಳುವ(ಖಿಚಿಇಜ ಠತಜಡಿ ಟಠಚಿಟಿ) ಸಾಲದ ಗರಿಷ್ಠ ಮಿತಿ ರೂ. 2,50,00,000/- (ಎರಡು ಕೋಟಿ, ಐವತ್ತು ಲಕ್ಷ) ಗಳಿಗೆ ಹೆಚ್ಚಿಸಿರುತ್ತೇವೆ. ಈ ಸಾಲಿನಿಂದ ಸಂಘದ ಕಾರ್ಯವ್ಯಾಪ್ತಿಯಲ್ಲಿ ಸಂಘದಿಂದ ಸದಸ್ಯತನ ಪಡೆದಿರುವ ವಕೀಲರು, ಸನ್ನದು ಲೆಕ್ಕಪರಿಶೋಧಕರು, ರಿಯಲ್ ಎಸ್ಟೇಟ್ ಉದ್ಯಮಿಗಳು, ಆಸ್ಪತ್ರೆ ನಡೆಸುವ ವೈದ್ಯರುಗಳು, ಶಾಲೆಗಳನ್ನು ನಡೆಸುತ್ತಿರುವವರು ಹಾಗೂ ಇನ್ನಿತರೆ ವೃತ್ತಿಗಳನ್ನು ನಡೆಸುತ್ತಿರುವ ಉದ್ಯಮಿಗಳಿಗೆ, ಅಂಗಡಿ ವ್ಯಾಪಾರ, ಕಾರ್ಖಾನೆಗಳನ್ನು ನಡೆಸುತ್ತಿರುವವರಿಗೆ ಅವರುಗಳ ಸಾಮಾನ್ಯ ಉದ್ದೇಶಕ್ಕೆ ಗರಿಷ್ಠ ರೂ. 1 ಕೋಟಿ ರೂಪಾಯಿಗಳವರೆಗೆ ಸೂಕ್ತ ಆಸ್ತಿಗಳನ್ನು ಅಡಮಾನ ಮಾಡಿ ಮೀರಳತೆ ಸಾಲವನ್ನು ನೀಡಲು ತೀರ್ಮಾನ ಕೈಗೊಂಡು, ಸಂಘದ ಸಾಲಗಾರ ಸದಸ್ಯರ ಅನುಕೂಲಕ್ಕಾಗಿ ಸಂಘದಿಂದ ಸದಸ್ಯರುಗಳಿಗೆ ನೀಡುತ್ತಿರುವ ಎಲ್ಲಾ ರೀತಿಯ ಸಾಲಗಳ ಮೇಲಿನ ಬಡ್ಡಿದರವನ್ನು ಶೇಕಡ 0.50 (ಅರ್ಧದಷ್ಟು) ಕಡಿಮೆ ಮಾಡಿದ್ದು, ಇದನ್ನು ಸಂತಸದಿಂದ ತಮಗೆ ತಿಳಿಸಲು ಇಚ್ಚಿಸುತ್ತೇವೆ ಈ ಎಲ್ಲಾ ಸಾಲಗಳ ಮೂಲಕ ಸಂಘದಿಂದ ರೂ.**76.19** ಕೋಟಿಗಳಷ್ಟು ಸಾಲವನ್ನು ಈ ಸಾಲಿನಲ್ಲಿ ವಿತರಿಸಿ, ಕಳೆದ ಸಾಲಿಗಿಂತ ರೂ.**10.20** ಕೋಟಿಗಳಷ್ಟು ಹೆಚ್ಚುವರಿ ಸಾಲವನ್ನು ಸದಸ್ಯರುಗಳಿಗೆ ನೀಡಿರುತ್ತೇವೆ.

ಒಬ್ಬ ಬಿಡು ಸದಸ್ಯನು ತಾನು ಪಡೆಯುವ ಈ ಮೇಲ್ಕಂಡ ವಿವಿಧ ಸಾಲಗಳ ಒಟ್ಟು ಗರಿಷ್ಠ ಮಿತಿಯನ್ನು ಈ ಹಿಂದೆ ಇರುವ ಮಿತಿಗಳ 2.10 ಕೋಟಿ ರೂಗಳಿಂದ ರೂ.2.50 (ಎರಡು ಕೋಟಿ ಐವತ್ತು ಲಕ್ಷಗಳಿಗೆ) ಈಗಾಗಲೇ ನಿಗದಿ ಪಡಿಸಿದ್ದು, ಈ ರೀತಿ ಸಂಘದಿಂದ ನೀಡುವ ಸಾಲಗಳ ಮಿತಿಗಳನ್ನು ಸಂಘದ ಇತಿಹಾಸದಲ್ಲಿಯೇ ಈ ಮಟ್ಟಕ್ಕೆ ಹೆಚ್ಚಿಸಿದ್ದು ನಮ್ಮ ಆಡಳಿತ ಮಂಡಳಿಯ ಸಾಧನೆಗಳಲ್ಲಿ ಒಂದಾಗಿದ್ದು ಈ ಸಾಲಿನಲ್ಲಿ 10 ಕೋಟಿಗಳಷ್ಟು ಹೆಚ್ಚುವರಿ ಸಾಲವನ್ನು ನೀಡಿದ್ದು ಸಂಘವು ವರದಿ ಸಾಲಿನಲ್ಲಿ ಅಂದಾಜು 76 ಕೋಟಿಗಳಷ್ಟು ಸಾಲವನ್ನು ವಿತರಿಸಿದ್ದು ಮುಂದಿನ 4 ವರ್ಷಗಳ ನಮ್ಮ ಆಡಳಿತದ ಅವಧಿಯಲ್ಲಿ ಸಂಘದಿಂದ ನೀಡುವ ಸಾಲವನ್ನು ರೂ. 100 ಕೋಟಿಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಿರುತ್ತೇವೆ.

ಸಂಘದಲ್ಲಿ ನೀಡುತ್ತಿರುವ ಮಹಿಳಾ ಚೇತನಾ ಜಂಟಿ ಭಾಧ್ಯತಾ ಗುಂಪು ಸಾಲಗಳಿಗೆ ಶೇ1ರಷ್ಟು ಬಡ್ಡಿದರವನ್ನು ಕಡಿತಗೊಳಿಸಿದ್ದು, ಸದ್ರಿ ಕಡಿತಗೊಳಿಸಿರುವ ಶೇ 1ರಷ್ಟು ಮೊತ್ತವನ್ನು ಮಹಿಳಾ ಚೇತನ ಕಲ್ಯಾಣ ನಿಧಿ ಎಂದು ಹೊಸ ನಿಧಿಯನ್ನು ಪ್ರಾರಂಭಿಸಿ, ಮಹಿಳೆಯರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಲು ಈ ವಿಶೇಷ ನಿಧಿಯನ್ನು ಪ್ರಾರಂಭಿಸಿರುವುದನ್ನು ಸಂತೋಷ ಪೂರ್ವಕವಾಗಿ ತಮಗೆ ತಿಳಿಸುತ್ತಿದ್ದೇವೆ. ದಿನಾಂಕ **31-03-2025ರ** ಅಂತ್ಯಕ್ಕೆ ರೂ. **5.64** ಲಕ್ಷಗಳಷ್ಟು ಸದಸ್ಯರಿಂದ ಮತ್ತು ಸದ್ರಿ ಈ ನಿಧಿಗೆ ಸಂಘದಿಂದ ನೀಡುತ್ತಿರುವ ಗರಿಷ್ಠ **15%** ವಾರ್ಷಿಕ ಬಡ್ಡಿಯಿಂದ ರೂ.**35** ಸಾವಿರಗಳನ್ನು ಸೇರಿಸಿ ಒಟ್ಟುರೂ.**5.99** ಲಕ್ಷಗಳಾಗಿರುತ್ತದೆ. ಈ ಸಾಲಿನಿಂದ

ಸದ್ರಿ ಯೋಜನೆಯಡಿಯಲ್ಲಿ ಸಾಲ ಪಡೆದ ಸದಸ್ಯೆಯು ಮರಣ ಹೊಂದಿದಾಗ ಅವರ ವರಸುದಾರರರಿಗೆ **ರೂ.5,000/–** ಮೊತ್ತವನ್ನು ಸದ್ರಿ ಕಲ್ಯಾಣ ನಿಧಿಯಿಂದ ನೀಡಲಾಗುತದೆ.

ಈ ಸಾಲಿನಲ್ಲಿ ಸಂಘದ ಹೊರ ಬಾಕಿಯ ಸಾಲದ ಮೇಲೆ ಸುಸ್ತಿ ಸಾಲದ ಪ್ರಮಾಣ**ಶೇ.4.63ರಷ್ಟಾಗಿದ್ದು,** ಸಂಘದ ವಸೂಲಾತಿ ಪ್ರಗತಿಯು ಶೇಕಡ **95.37ರಷ್ಟು** ದಾಟಿರುವ ಕಾರಣ ಸಂಘವು ಈ ಬಾರಿ ಲೆಕ್ಕ ಪರಿಶೋಧನಾ **ವರದಿಯ ಶ್ರೇಣಿಯಲ್ಲಿ (ಗ್ರೇಡ್) "ಎ" ಶ್ರೇಣಿಯನ್ನು** ಹೊಂದಿರುವುದನ್ನು ಹೆಮ್ಮೆಯಿಂದ ತಿಳಿಸುತ್ತೇವೆ.

ಸಂಘದ 'ಎ' ತರಗತಿ ಮತ್ತು ನಾಮಮಾತ್ರ ಸದಸ್ಯರಿಗೆ ತ್ವರಿತವಾಗಿ ಅಭರಣ ಸಾಲವನ್ನು ನೀಡಲು ಹಾಗೂ ಆಭರಣಗಳನ್ನು ಪರಿವೀಕ್ಷಣೆ ಮಾಡಲು ಪ್ರತ್ಯೇಕ ಕೊಠಡಿಯ ವ್ಯವಸ್ಥೆಯನ್ನು ಮಾಡಿರುತ್ತೇವೆ. ಸಂಘದ ನೂತನ ಕಟ್ಟಡದಲ್ಲಿ ಸಂಘವು ತನ್ನ ಕೇಂದ್ರ ಕಛೇರಿಯನ್ನು ಹೊಂದಿದ್ದು ಸದ್ರಿ ಕಛೇರಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾನದಂಡದಂತೆ ಭದ್ರತಾ ಕೊಠಡಿಯನ್ನು ನಿರ್ಮಾಣ ಮಾಡಿದ್ದು ಸಂಘದ ಸದಸ್ಯರು ಹಾಗೂ ಗ್ರಾಹಕರಿಗೆ ಭದ್ರತಾ ಲಾಕರ್‌ಗಳ ವ್ಯವಸ್ಥೆಯನ್ನು ಮಾಡಿರುತ್ತೇವೆ.

ಸಂಘದ ಸದಸ್ಯರು ಸಾಲ ಪಡೆದು ಮರಣ ಹೊಂದಿದ್ದ ಸಮಯದಲ್ಲಿ ಅವರುಗಳು ಪಡೆದಿರುವ ಸಾಲವನ್ನು ಮರುಪಾವತಿಸಲು ಅವರ ಕುಟುಂಬ ವರ್ಗದವರಿಗೆ ಸಾಲ ಮರುಪಾವತಿಸಲು ಅನುಕೂಲವಾಗುವಂತೆ ಸಂಘದಲ್ಲಿ ಸಾಲಗಾರ ಮರಣೋತ್ತರ ಸಾಲ ಪರಿಹಾರ ನಿಧಿಯೊಂದನ್ನು ಪ್ರಾರಂಭಿಸಿದ್ದು ಹಾಲಿ ಈ ನಿಧಿಯಲ್ಲಿ **31–03–2025**ರ ಅಂತ್ಯಕ್ಕೆ ರೂ. **50.54** ಲಕ್ಷಗಳನ್ನು ಸದಸ್ಯರಿಂದ ಪಡೆದು, ಸದ್ರಿ ಈ ನಿಧಿಗೆ ಸಂಘದಿಂದ ನೀಡುತ್ತಿರುವ ಗರಿಷ್ಠ **15%** ವಾರ್ಷಿಕ ಬಡ್ಡಿ ಮತ್ತು ಲಾಭಾಂಶ ವಿಲೇವಾರಿಯಿಂದ ನೀಡುತ್ತಿರುವ ಮೊತ್ತವನ್ನು ಸೇರಿಸಿ ಪರಿಹಾರ ನಿಧಿಯು ರೂ. **45.88** ಲಕ್ಷಗಳಿದ್ದು, ಇವೆರಡನ್ನು ಒಟ್ಟು ಸೇರಿಸಿ ರೂ. **96.42** ಲಕ್ಷಗಳಾಗಿರುತ್ತದೆ. ಸಾಲಗಾರ ಸದಸ್ಯರು ಮೃತಪಟ್ಟಂತಹ ಸಂದರ್ಭದಲ್ಲಿ ಅವರುಗಳು ಈ ಹಿಂದೆ ಸಂಘದಲ್ಲಿ ಹೂಡಿದ ವಂತಿಕೆಯ ಮೊತ್ತದ **15** ಪಟ್ಟು ಅಥವಾ **ರೂ.3 ಲಕ್ಷ** ಇವುಗಳಲ್ಲಿ ಯಾವುದು ಗರಿಷ್ಠವೋ ಅಷ್ಟು ಮಾತ್ರವನ್ನು ಅವರುಗಳು ಹೊಂದಿರಬಹುದಾದ ಸಾಲಕ್ಕೆ, ಅವರ ವಾರಸುದಾರರು ಸದ್ರಿ ಸಾಲವನ್ನು ಚುಕ್ತ ಮಾಡಲು ಬಂದ ಸಂದರ್ಭದಲ್ಲಿ ಸದ್ರಿ ಸಾಲವನ್ನು ಚುಕ್ತಗೊಳಿಸಲು ಅವರ ಕಟುಂಬಸ್ಥರಿಗೆ ಬಹಳ ಅನುಕೂಲವಾಗಬಹುದು, ಇದು ನಮ್ಮ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಇದೇ ರೀತಿ ಮಹಿಳಾಚೇತನ ಗುಂಪು ಸಾಲದ ಯೋಜನೆಯಡಿಯಲ್ಲಿ ಮಹಿಳಾ ಚೇತನಾ ಮರಣ ಪರಿಹಾರ ನಿಧಿಯಿಂದ **31–03–2025**ರ ಅಂತ್ಯಕ್ಕೆ ರೂ.**76.23** ಲಕ್ಷಗಳಿದ್ದು, ಸದ್ರಿ ಈ ನಿಧಿಗೆ ಸಂಘದಿಂದ ನೀಡುತ್ತಿರುವ ಬಡ್ಡಿ ಮೊತ್ತವನ್ನು ಸೇರಿಸಿ ರೂ.**14.92** ಲಕ್ಷಗಳಿದ್ದು, ಇವೆರಡನ್ನು ಒಟ್ಟು ಸೇರಿಸಿ ರೂ.**91.15** ಲಕ್ಷಗಳಾಗಿರುತ್ತದೆ. ಸದ್ರಿ ಸಾಲಗಾರರು ಮರಣ ಹೊಂದಿದಾಗ, ನಮ್ಮ ಸಂಘದಲ್ಲಿ ಸದ್ರಿರವರು ಹೊಂದಿರುವ ಸಾಲದ ಹೊರ ಬಾಕಿ ಇರುವ ಮೊತ್ತವನ್ನು ಸದ್ರಿ ನಿಧಿಯಿಂದ ಹೊಂದಾಣಿಕೆ ಮಾಡಿ ಸಾಲ ಚುಕ್ತ ಮಾಡಿಕೊಡಲಾಗುವುದು. ಇದ್ದರಿಂದ ಸದ್ರಿರವರ ಕುಟುಂಬಸ್ಥರಿಗೆ ಬಹಳ ಅನುಕೂಲವಾಗುತ್ತದೆ.

ಸಂಘವು ವನಸಿರಿಯಂತಹ ಸಾಮಾಜಿಕ ಕಾರ್ಯಕ್ರಮವನ್ನು ನಡೆಸುತ್ತಿದ್ದರೂ ಸಾಕಷ್ಟು ಸಾಮಾಜಿಕ ಕೆಲಸಗಳಲ್ಲಿ ಕೈಜೋಡಿಸುವ ನಿಟ್ಟಿನಲ್ಲಿ ಃಂಘದ ಸಾರ್ವಜನಿಕ ಸೇವಾ ಕಾರ್ಯಗಳು ಮುಂದುವರೆದು ಕುಶಾಲನಗರ ಕೋಣಮಾರಿಯಮ್ಮ ದೇವರ ಟ್ರಸ್ಟ್ ಇವರ ನೂತನ ಸಮುದಾಯ ಭವನ ನಿರ್ಮಾಣಕ್ಕೆ ರೂ 25,000/– ಗಳ ಸಹಾಯ ಧನವನ್ನು ನೀಡಿದ್ದು, ಕೂಡ್ಲೂರು ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಅಬಾಕಸ್ (Abacus) ಪುಸ್ತಕ ಮತ್ತು ಕಲಿಕಾ ಸಾಮಾಗ್ರಿಗಳನ್ನು ರೂ 37,100/– ರೂಪಾಯಿಗಳ ವೆಚ್ಚದಲ್ಲಿ ಖರೀದಿಸಿ ಆ ಶಾಲೆಯ ಎಲ್ಲಾ ಬಡಮಕ್ಕಳಿಗೆ ವಿತರಣೆ ಮಾಡಿ ಕುಶಾಲನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನೂತನ ಸಭಾಂಗಣಕ್ಕೆ ರೂ 16,000/– ಗಳ ವೆಚ್ಚದಲ್ಲಿ ವೇದಿಕೆಯ ಹಿಂಭಾಗದ ಪರದೆಯನ್ನು ಸಂಘದಿಂದ ನೀಡಿದ್ದು, ಇವೆಲ್ಲವೂ ಸಂಘವು ನಮ್ಮ ಈ ಸಮಾಜದ ಮೇಲಿಟ್ಟಿರುವ ಕಾಳಜಿಯಾಗಿರುತ್ತದೆ. ಕಳೆದ ಮಹಾಸಭೆಯಲ್ಲಿ ತೆಗೆದುಕೊಂಡ

ತೀರ್ಮಾನದಂತೆ ಕುಶಾಲನಗರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ರೂ 11 ಲಕ್ಷಗಳ ವೆಚ್ಚದಲ್ಲಿ ಉನ್ನತ ದರ್ಜೆಯ ಗಣಕಯಂತ್ರ ಪ್ರಯೋಗಾಲಯ (Computer lab) ಒದಗಿಸಿ ಕೊಡಲು ತೀರ್ಮಾನ ಕೈಗೊಂಡಿರುತ್ತೇವೆ. ಸದ್ರಿ ಈ ವೆಚ್ಚಕ್ಕೆ ಇಲಾಖೆಯಿಂದ ಅನುಮೋದನೆಯನ್ನು ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಇವರಿಗೆ ಸಲ್ಲಿಸಲಾಗಿದ್ದು, ಇವರ ಅನುಮತಿ ಬಂದ ನಂತರ ಯಾವುದೇ ಸಹಕಾರ ಸಂಘವು ಮಾಡದೇ ಇರುವಂತಹ ಒಂದು ಉತ್ಕೃಷ್ಟ ಸಾರ್ವಜನಿಕ ಸೇವೆಯನ್ನು ನಾವುಗಳು ಮಾಡುವವರಿದ್ದೇವೆ. ಮುಂದಿನ 4 ವರ್ಷಗಳಿಗೆ ಸಂಘವು ಪ್ರಾರಂಭವಾಗಿ 25 ವರ್ಷ ಪೂರೈಸುತ್ತಿದ್ದು ಸದ್ರಿ ಬೆಳ್ಳಿ ಮಹೋತ್ಸವವನ್ನು ಆಚರಿಸಲು ಈಗಿನಿಂದಲೇ ಪೂರ್ವ ಸಿದ್ದತೆಯನ್ನು ಮಾಡಿಕೊಳ್ಳುತ್ತಿದ್ದೇವೆ. ಬೆಳ್ಳಿ ಮಹೋತ್ಸವದ ಸವಿ ನೆನಪಿಗಾಗಿ ಸೂಕ್ತ ಸ್ಮಾರಕ ಭವನವನ್ನು ನಿರ್ಮಾಣ ಮಾಡಿ, ಬೆಳ್ಳಿ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವವರಿದ್ದೇವೆ.

ವರದಿ ಸಾಲಿನಲ್ಲಿ ರೂ.**402.69** ಕೋಟಿ ವಾರ್ಷಿಕ ವ್ಯವಹಾರ ನಡೆಸಿದ್ದು, ಅನುತ್ಪಾದಕ ಆಸ್ತಿಗಳಿಗೆ ರೂ **2.26 ಲಕ್ಷದಷ್ಟು,** ಆದಾಯ ತೆರಿಗೆಗಳಿಗೆ ರೂ**10.64** ಲಕ್ಷ ಹಾಗೂ ಕಟ್ಟಡ ಮತ್ತು ಇತರೇ ಸವಕಳಿಗೆ ರೂ **10.03** ಲಕ್ಷಗಳನ್ನು ಕಾಯ್ದಿರಿಸಿದ ಒಟ್ಟು ರೂ.**22.93** ಲಕ್ಷದಷ್ಟು ಮೊತ್ತವನ್ನು ಕಾಯ್ದಿರಿಸಲಾಗಿದೆ. ತದನಂತರ ಸಂಘವು ರೂ**2.02 ಕೋಟಿ**ಗಳಷ್ಟು ನಿವ್ವಳ ಲಾಭ ಗಳಿಸಿರುತ್ತದೆ. ಸಂಘವು ಕಳೆದ **21** ವರ್ಷಗಳಿಂದಲೂ ಸತತವಾಗಿ ಲಾಭದಲ್ಲಿ ಮುನ್ನಡೆಯುತ್ತಿದ್ದು, ಈ ಬಾರಿಯು ಸಹ ಸಂಘವು ತನ್ನ ಲಾಭವನ್ನು ಕೋಟಿ ರೂಪಾಯಿಗೆ ಹೆಚ್ಚಿಸಿಕೊಂಡಿದೆ. ಸದಸ್ಯರಿಗೆ ಉತ್ತಮ ಸೇವೆ ಸಲ್ಲಿಸುತ್ತಾ ಬಂದಿರುತ್ತೇವೆ. ಸದಸ್ಯರಿಗೆ ಕಳೆದ **20** ವರ್ಷಗಳಿಂದ ಶೇ.7ರಿಂದ ಶೇ.25 ರಷ್ಟು ಡಿವಿಡೆಂಟ್ ನೀಡುತ್ತಿದ್ದು, **ಈ ಬಾರಿಯೂ ಕೂಡ ಶೇ.25ರಷ್ಟು ಡಿವಿಡೆಂಡ್‌ನ್ನು ನಮ್ಮ ಸದಸ್ಯರಿಗೆ ನೀಡುತ್ತಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇವೆ.**

- ಆಸ್ತಿ ಖರೀದಿಸಿರುವ ಬಗ್ಗೆ.
- ಬೀದಿಬದಿ ವ್ಯಾಪಾರಿಗಳಿಗೆ ಸಾಲ ನೀಡುವ ಬಗ್ಗೆ.

## ಮಹಾಸಭೆ

**ಸಂಘದ 2024–25 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 23–08–2025ನೇ ಶನಿವಾರ ಪೂರ್ವಾಹ್ನ 11.00 ಗಂಟೆಗೆ ಕುಶಾಲನಗರದ ಎ.ಪಿ.ಸಿ.ಎಂ.ಎಸ್ ಸಭಾಂಗಣದಲ್ಲಿ ಮಹಾಸಭೆಯನ್ನು ಕರೆಯಲಾಗಿದೆ**